# ಉಳ್ಳಾಲ ಪುರಸಭೆ, ದ.ಕ

## ಉಳ್ಳಾಲ ಸೈಯ್ಯದ ಮದನಿ ದರ್ಗಾದ 19ನೇ ಉರೂಸು ಸಮಾರಂಭದ ಪ್ರಯುಕ್ತ ಅಗತ್ಯವಿರುವ ತುರ್ತು ಅಲ್ಪಾವಧಿಯ ಕಾಮಗಾರಿಗಳನ್ನು ನಿರ್ವಹಿಸಲು ಸಾಮಾಗ್ರಿಗಳನ್ನು ಸರಬರಾಜುಗೊಳಿಸುವ ಬಗ್ಗೆ ಅಲ್ಪಾವಧಿ ಟೆಂಡರು/ಕೋಟೇಶನುಗಳ ಪ್ರಕಟಣೆ

**ನಂಬ್ರ:ಉಪುಸ(1)ಸಿಆರ್:86/2009–2010** ದಿನಾಂಕ: 19–02–2010

ಉಳ್ಳಾಲ ಪುರಸಭಾ ವ್ಯಾಪ್ತಿಯ ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭಕ್ಕೆ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸುವ ಮತ್ತು ಸಾಮಾಗ್ರಿಗಳನ್ನು ಒದಗಿಸುವ ಬಗ್ಗೆ ಅರ್ಹ ಅನುಭವಿ ಉಳ್ಳಾಲ ಪುರಸಭೆಯ ನೋಂದಾಯಿತ ಲೋಕೋಪಯೋಗಿ ಗುತ್ತಿಗೆದಾರರಿಂದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನಿಗದಿತ ದಿನಕ್ಕೊಳಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರಿಗೆ ಸಲ್ಲಿಸಬಹುದು.. ಟೆಂಡರು ಸ್ವೀಕರಿಸುವ ಯಾ ತಿರಸ್ಕರಿಸುವ ಅಥವಾ ಅಗತ್ಯವಿದ್ದಲ್ಲಿ ಯಾವುದೇ ಕಾರಣ ನೀಡದೆ ಮುಂದೂಡುವ ಹಕ್ಕನ್ನು ಪುರಸಭೆಯ ಕಾಯ್ದಿರಿಸಿಕೊಂಡಿದೆ. ಟೆಂಡರು ಶರ್ತಗಳನ್ನು ಮತ್ತು ಇತರ ಮಾಹಿತಿಯನ್ನು ಕಚೇರಿ ಸಮಯದಲ್ಲಿ ರಜಾದಿನ ಹೊರತುಪಡಿಸಿ ಕಚೇರಿಯಿಂದ ಪಡೆಯಬಹುದಾಗಿದೆ. ಟೆಂಡರು ಫಾರ್ಮುಗೆ ಅರ್ಜಿ ನೀಡುವ ಮತ್ತು ಟೆಂಡರು ಫಾರ್ಮು ನೀಡುವ ಕೊನೆಯ ದಿನಾಂಕ: 08–03–2010 ಮತ್ತು ಭರ್ತಿ ಮಾಡಿದ ಟೆಂಡರುಗಳನ್ನು ಸಲ್ಲಿಸುವ ದಿನಾಂಕ 09–03–2010 ಅಪರಾಹ್ನ ಗಂಟೆ 4–00ಕ್ಕೆ ಹಾಗೂ ಬಂದ ಟೆಂಡರುಗಳನ್ನು ಅದೇ ದಿನ ತೆರೆಯಲಾಗುವುದು. ಇಲ್ಲದಿದ್ದಲ್ಲಿ ಟೆಂಡರು/ಕೋಟೇಶನು ತೆರೆಯುವ ದಿನವನ್ನು ತಿಳಿಸಲಾಗುವುದು.

| ಕ್ರಮ ಸಂಖ್ಯೆ | ಕಾಮಗಾರಿಯ ವಿವರ | ಟೆಂಡರಿಗಿಟ್ಟ ಕಾಮಗಾರಿಯ ಅಂದಾಜುಮೊತ್ತ ರೂ.ಗಳಲ್ಲಿ | ಗುತ್ತಿಗೆದರರು ನೀಡಬೇಕಾದ ಇಎಂಡಿ ರೂ.ಗಳಲ್ಲಿ | ಟೆಂಡರು ಫಾರ್ಮು ಬೆಲೆ | ಅರ್ಹರಾದ ಗುತ್ತಿಗೆದಾರರ ದರ್ಜೆ | ಕಾಮಗಾರಿ ನಿರ್ವಹಿಸಲು ಪೂರ್ತಿಗೊಳಿಸಲು ನಿಗದಿಪಡಿಸಿದ ಅವಧಿ |
|---|---|---|---|---|---|---|
| I | ನೈರ್ಮಲ್ಯ ಕಾಮಗಾರಿ | | | | | |
| 1 | ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭ ಸಮಯದಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಒಟ್ಟು 60 ಜನ ಪೌರಕಾರ್ಮಿಕರನ್ನು ಮತ್ತು ಪ್ರತಿ ಹತ್ತು ಜನಕ್ಕೆ ಒಬ್ಬ ಮೇಲ್ವಿಚಾರಕರನ್ನು ಹಾಗೂ ಪ್ರತಿದಿನ ಲಾರಿ ನಿಯೋಜಿಸಿ ಉರೂಸು ಸಮಾರಂಭದ ಪರಿಸರ ಮತ್ತು ರಸ್ತೆಗಳನ್ನು ಗುಡಿಸಿ ಕಸ ಸಂಗ್ರಹಿಸಿ ಚರಂಡಿಯ ಕೊಳಚೆ ಹೂಳೆತ್ತಿ ಮಂಗಳೂರು ಮಹಾನಗರಪಾಲಿಕೆಯ ಡಂಪಿಂಗ್ ಗ್ರೌಂಡಿಗೆ ಸಾಗಿಸುವುದು. ಕ್ರಿಮಿನಾಶಕಗಳನ್ನು ಸಿಂಪಡಿಸುವುದು ನೈರ್ಮಲ್ಯಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು. (24–03–2010ರಿಂದ 02–05–2010) | – | 10000.00 | 200.00 | ಅಧಿಕೃತ ಸ್ಯಾನಿಟರಿ ಗುತ್ತಿಗೆದಾರರು/ ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | 24–03–2010 ರಿಂದ 02–05–2010 |
| 2 | ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭದ ಬಗ್ಗೆ ನೈರ್ಮಲ್ಯ ಕಾಮಗಾರಿಗೆ ಕ್ರಿಮಿನಾಶಕಗಳನ್ನು ಬ್ಲೀಚಿಂಗ್ ಪೌಡರ್, ಫಿನಾಯಿಲ್, ಸುಣ್ಣದ ಹುಡಿ ಇತ್ಯಾದಿ ಮತ್ತು ಸಾಮಾಗ್ರಿ ಸಲಕರಣೆಗಳನ್ನು ಒದಗಿಸುವ ಬಗ್ಗೆ ( ಕೋಟೇಶನು) | – | 3000.00 | 100.00 | ಅಧಿಕೃತ ತಯಾರಕರು /ಮಾರಾಟಗಾರರು | 24–03–2010 ರಿಂದ 02–05–2010 |
| 3 | ಉರೂಸು ಸಂದರ್ಭದ ಅವಧಿಯಲ್ಲಿ ಬರಲಿರುವ ಯಾತ್ರಿಕರ ಉಪಯೋಗಕ್ಕಾಗಿ ಶೌಚಾಲಯ ನಿರ್ಮಿಸುವುದು, ಫೈಬರ್ ಶೀಟು ಬಳಸಿ ಸುತ್ತುಗೋಡೆ ನಿರ್ಮಿಸಿ ಮುಚ್ಚುಗುಂಡಿ ತಳಪಾಯ, 6 ಪಿಂಗಾಣಿ ಬೇಸಿನ್ ಅಳವಡಿಸಿದ ತಾತ್ಕಾಲಿಕ ಶೌಚಾಲಯ ನಿರ್ಮಿಸಲು ಅರ್ಹ ಗುತ್ತಿಗೆದಾರರಿಂದ ಪ್ರತಿಯೊಂದು ಬ್ಲಾಕ್‌ಗೆ ತಗಲುವ ವೆಚ್ಚಗಳನ್ನು ನಮೂದಿಸುವುದು 6 ಸ್ಥಳಗಳಲ್ಲಿ (ಒಟ್ಟು 40 ದಿನಗಳಿಗೆ)ಸಮುಚ್ಚಯ ಒಂದರ ದರ (ಕೋಟೇಶನ್) | – | 7500.00 | 100.00 | ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು/ತಾತ್ಕಲಿಕ ಶೌಚಾಲಯ ನಿರ್ಮಾಣ ಗುತ್ತಿಗೆದಾರರು | 24–03–2010 ರಿಂದ 02–05–2010 |
| 4 | ಉರೂಸ್ ಸಮಾರಂಭದ ಅವಧಿಯಲ್ಲಿ ರಸ್ತೆಯಲ್ಲಿ ಧೂಳು ನಿಯಂತ್ರಿಸಲು ರಸ್ತೆಗೆ ನೀರು ಸಿಂಪಡಿಸುವುದು, ಟ್ಯಾಂಕರುಗಳ ನೀರಿನ ಸಾಮಾರ್ಥ್ಯವನ್ನು ಟ್ರಿಪ್ ಒಂದರ ದರವನ್ನು ನಮೂದಿಸುವುದು( ಈ ದರದಲ್ಲಿ ರಸ್ತೆಯ ಶೋಲ್ಡರ್‌ಗಳಲ್ಲಿ ನೀರನ್ನು ಹನಿಹನಿಯಾಗಿ ಸಿಂಪಡಿಸುವುದು ಎಲ್ಲಾ ಕೆಲಸ ಸೇರಿದಂತೆ) (ಕೋಟೇಶನು) | – | 3000.00 | 100.00 | ಟ್ಯಾಂಕರ್ ಮಾಲಕರು/ಪಿಡಬ್ಲ್ಯೂಡಿ ಗುತ್ತಿಗೆದಾರರು | 24–03–2010 ರಿಂದ 02–05–2010 |

| | | | | | | |
|---|---|---|---|---|---|---|
| 5 | ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭದ ಸಮಯ ನೀರು ಸರಬರಾಜು, ದಾರಿದೀಪಗಳ ದುರಸ್ತಿ, ನಗರ ಸ್ವಚ್ಛತೆ ಕಾಮಗಾರಿ ಹಾಗೂ ನಾಗರಿಕ ಸೌಲಭ್ಯಗಳ ಉಸ್ತುವಾರಿಗಾಗಿ 2 ತಿಂಗಳ ಅವಧಿಗೆ ದಿನ ಒಂದರ ಗರಿಷ್ಟ 90ಕಿ.ಮೀ ಕ್ರಮಿಸಲು ಹಾಗೂ ಇಂದನ ಮತ್ತು ಚಾಲಕನನ್ನು ಒಳಗೊಂಡ ಉತ್ತಮ ಸ್ಥಿತಿಯಲ್ಲಿರುವ ವಾಹನವನ್ನು ಬಾಡಿಗೆ ನೆಲೆಯಲ್ಲಿ ಒದಗಿಸಲು ದಿನವೊಂದಕ್ಕೆ ಬಾಡಿಗೆ ನಮೂದಿಸಿದ ದರಪಟ್ಟಿಯಲ್ಲಿ ನೀಡುವುದು.(ಕೋಟೇಶನು) | – | 2000.00 | 100.00 | ಜೀಪ್ ಮಾಲಕರು /ಅಧಿಕೃತ ಟ್ರಾವೆಲ್ ಏಜೆನ್ಸಿ | 24–03–2010 ರಿಂದ 02–05–2010 |
| 6 | **ತಾತ್ಕಾಲಿಕ ಕುಡಿಯುವ ನೀರಿನ, ಸರಬರಾಜು** | | | | | |
| | ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸು ಸಮಾರಂಭದ ಯಾತ್ರಾರ್ಥಿಗಳಿಗೆ ನಿರಂತರವಾಗಿ ಕುಡಿಯುವ ನೀರಿನ ಪೂರೈಕೆ ಸಾರ್ವಜನಿಕ ನಳ್ಳಿಯ ಸಮುಚ್ಚಯ ಕನಿಷ್ಟ 6 ನಳ್ಳಿಗಳು (ಕನಿಷ್ಟ ಆರು ಸ್ಥಳಗಳಲ್ಲಿ ನಿರ್ಮಿಸಿ ನಿಗದಿತ ಅವಧಿ ನಂತರ ತೆಗೆದು ಖುಲ್ಲಾಗೊಳಿಸುವುದು )(ಕೋಟೇಶನ್) | – | 2500.00 | 100.00 | ಪ್ಲಂಬರ್‌ಗಳು | 24–03–2010 ರಿಂದ 02–05–2010 |
| 7 | ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಬರುವ ಅಗತ್ಯವಿರುವ ಬಸ್ಸು ತಂಗುದಾಣಗಳನ್ನು ದುರಸ್ತಿಪಡಿಸಿ ಸುಣ್ಣ ಬಣ್ಣ ಬಳಿಯುವುದು | 2.00 | 5000.00 | 200.00 | ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | 30ದಿನಗಳು |
| 8 | ಉಳ್ಳಾಲ ಪುರಸಭೆಯ ತೊಕ್ಕೊಟ್ಟು ವಾಣಿಜ್ಯ ಸಂಕೀರ್ಣಕ್ಕೆ ನಾಮಫಲಕ ಬರೆಯುವುದು(ಕೊಟೇಶನು) | – | 2000.00 | 100.00 | ನಾಮಫಲಕ ಬರೆಯುವವರು (ಅರ್ಟಿಸ್ಟ್) | ಏಳು ದಿವಸದೊಳಗೆ |
| 9 | ಉಳ್ಳಾಲ ಉರೂಸು ಬಗ್ಗೆ ಪುರಸಭೆಯ ವತಿಯಿಂದ ಸ್ವಾಗತ ಕಮಾನು ರಚಿಸುವುದು (2 ಸಂಖ್ಯೆ)<br>1)ತೊಕ್ಕೊಟ್ಟು ಹೆದ್ದಾರಿ ಬಳಿ ಮತ್ತು ಪುರಸಭೆ ಕಚೇರಿಯ ಬಳಿ (ಕೋಟೇಶನು) | | 5000.00 | 100.00 | ಫ್ಯಾಬ್ರಿಕೇಟರ್ಸ್/ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | ಏಳು ದಿವಸದೊಳಗೆ |
| 10 | ಉಳ್ಳಾಲ ಪುರಸಭಾ ವ್ಯಾಪ್ತಿ ಅಬ್ಬಕ್ಕ ಸರ್ಕಲಿಗೆ ಮತ್ತು ಮೇಲಂಗಡಿಯ ವಸತಿಗೃಹದ ಎದುರುಗಡೆ ರಸ್ತೆಯ ಡಿವೈಡರ್‌ಗಳಿಗೆ ಸುಣ್ಣ ಬಣ್ಣ ಬಳಿಯುವುದು | 0.35 | 875.00 | 100.00 | 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | ಏಳು ದಿವಸದೊಳಗೆ |
| 11 | ಉಳ್ಳಾಲ ಪುರಸಭಾ ವಠಾರದಿಂದ ದರ್ಗಾದವರೆಗೆ ಸೆಮಿ ಹೈಮಾಸ್ಟ್ ಕಂಬಗಳಿಗೆ ಪೈಂಟ್ ಬಳಿಯುವುದು (ಕೋಟೇಶನು) | – | 500.00 | 50.00 | 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | ಏಳು ದಿವಸದೊಳಗೆ |
| 12 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಂಕ್ರೀಟು ರಸ್ತೆಗಳಿಗೆ ರಬ್ಬರ್ ಹಂಪ್ಸ್ ಅಳವಡಿಸುವುದು( ಹಂಪ್ಸ್ ಒಂದರ ದರ ನಮೂದಿಸುವುದು)(ಕೋಟೇಶನು) | – | 1000.00 | 100.00 | 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | ಏಳು ದಿವಸದೊಳಗೆ |
| 13 | ಉಳ್ಳಾಲ ಪುರಸಭಾ ವ್ಯಾಪ್ತಿಯ ದರ್ಗಾದ ಮುಖ್ಯ ಗೇಟಿನ ಹತ್ತಿರ ಹೈಮಾಸ್ಟ್ ಬೀದಿದೀಪ ಅಳವಡಿಸುವುದು | 5.00 | 12500.00 | 500.00 | ವಿದ್ಯುತ್ ಗುತ್ತಿಗೆದಾರರು | 30ದಿನಗಳು |
| 14 | ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ನೂತನ ಬಸ್ಸುನಿಲ್ದಾಣದ ಆವರಣದಲ್ಲಿರುವ ಖಾಲಿ ಸ್ಥಳಕ್ಕೆ ಲ್ಯಾಂಡ್ ಸ್ಕೇಪಿಂಗ್ ರಚಿಸುವುದು | 0.50 | 1250.00 | 100.00 | 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು | 30ದಿನಗಳು |

**ಸಹಿ/–**
**(ಯು.ಎ. ಇಸ್ಮಾಯಿಲ್)**
**ಅಧ್ಯಕ್ಷರು**
**ಉಳ್ಳಾಲ ಪುರಸಭೆ,ದ.ಕ**

**ಸಹಿ/–**
**(ಬಿ.ಸಿ. ಸದಾನಂದ)**
**ಮುಖ್ಯಾಧಿಕಾರಿ**
**ಉಳ್ಳಾಲ ಪುರಸಭೆ,ದ.ಕ**